7. ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು 2000 ಅನ್ನು ತಿದ್ದುಪಡಿ ಮಾಡಿ ದಿನಾಂಕ 30-11-2000ದಂದು ಹೊರಡಿಸಲಾದ ಸಿಆಸುಇ: 72: ಸೇನಿಡಿ: 2000(1)ನೇ ಸಂಖ್ಯೆಯ ಅಧಿಸೂಚನೆ;

8. ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು 2000 ಅನ್ನು ತಿದ್ದುಪಡಿ ಮಾಡಿ ದಿನಾಂಕ 30-11-2000ದಂದು ಹೊರಡಿಸಲಾದ ಸಿಆಸುಇ: 72: ಸೇನಿಡಿ: 2000(2)ನೇ ಸಂಖ್ಯೆಯ ಅಧಿಸೂಚನೆ;

9. ಕರ್ನಾಟಕ ಸರ್ಕಾರ ಸಚಿವಾಲಯ ಸೇವೆಗಳು (ನೇಮಕಾತಿ) ನಿಯಮಗಳು, 1992ಕ್ಕೆ ತಿದ್ದುಪಡಿ ಮಾಡಿ ದಿನಾಂಕ 18-01-2000ದಂದು ಹೊರಡಿಸಲಾದ ಸಿಆಸುಇ: 40: ಸೇನಿಡಿ: 97ನೇ ಸಂಖ್ಯೆಯ ಅಧಿಸೂಚನೆ;

10. ಕರ್ನಾಟಕ ನಾಗರೀಕ ಸೇವೆಗಳು (ಭೂ ಮಾಪನ ಮತ್ತು ಕಂದಾಯ ವ್ಯವಸ್ಥೆ ಇಲಾಖೆಯ ತಾತ್ಕಾಲಿಕ ನಕಲುದಾರರುಗಳ ಸೇವೆಯನ್ನು ವಿಲೀನಗೊಳಿಸುವ (ವಿಶೇಷ) ನಿಯಮಗಳು 1999ಕ್ಕೆ ತಿದ್ದುಪಡಿ ಮಾಡಿ ದಿನಾಂಕ 07-11-2000ದಂದು ಹೊರಡಿಸಲಾದ ಸಿಆಸುಇ: 10: ಸೇನಿಇ: 99ನೇ ಸಂಖ್ಯೆಯ ಅಧಿಸೂಚನೆ;

**ಭಾರತ ಸಂವಿಧಾನದ 213(2)(ಎ) ಅನುಚ್ಛೇದದ ಮೇರೆಗೆ;**

10.ಎ. 1979ರ ಕರ್ನಾಟಕ ವಿಲಾಸಗಳ ಮೇಲಿನ ತೆರಿಗೆ ಅಧಿನಿಯಮಕ್ಕೆ ತಿದ್ದುಪಡಿ ಮಾಡಿ ದಿನಾಂಕ 23-01-2001ರಂದು ಹೊರಡಿಸಲಾದ ಸಂವ್ಯಶಾಇ: 65: ಶಾಸನ: 2000ದ ಅಧ್ಯಾದೇಶ ಸಂಖ್ಯೆ: 3;

**1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯ 39ನೇ ಪ್ರಕರಣದ ಮೇರೆಗೆ;**

11. ತಯಾರಿಸಲಾದ ಬೆರಕೆ ಕಾಂಕ್ರೀಟಿನ ಮೇಲೆ ವರ್ತಕರು ಪಾವತಿಸಬೇಕಾದ ತೆರಿಗೆಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಶೇಕಡಾವಾರು 10ರಷ್ಟು ಕಡಿಮೆಗೊಳಿಸುವ ಸಲುವಾಗಿ ದಿನಾಂಕ 15-11-2000ದಂದು ಹೊರಡಿಸಲಾದ ಎಫ್ ಡಿ: 154: ಸಿಎನ್ ಎಲ್: 2000ನೇ ಸಂಖ್ಯೆಯ ಅಧಿಸೂಚನೆ;

12. ಭಾರತ ಸರ್ಕಾರದ ಮಾಹಿತಿ ಮತ್ತು ಆಕಾಶವಾಣಿ ಪ್ರಸರಣಾ ಸಚಿವಾಲಯದ ಪ್ರಕಟಣಾ ವಿಭಾಗ ತಯಾರಿಸಿರುವ ಕಾಂಪ್ಯಾಕ್ಟ್ ಡಿಸ್ಕ್‌ನ ಮಾರಾಟದ ಮೇಲೆ ಪಾವತಿಸಬೇಕಾದ ತೆರಿಗೆಗೆ ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 13-12-2000ದಂದು ಹೊರಡಿಸಲಾದ ಎಫ್ ಡಿ: 247: ಸಿಎನ್ ಎಲ್: 99ನೇ ಸಂಖ್ಯೆಯ ಅಧಿಸೂಚನೆ;

13. ಶೈಕ್ಷಣಿಕ ಸಂಪನ್ಮೂಲ ಸಾಮಗ್ರಿಗಳ ಉದ್ದೇಶಕ್ಕಾಗಿ ಆಟದ ಸಾಮಾನುಗಳು ಮತ್ತು ಬೋಧನಾ ನೆರವು ಸೇವೆಯಲ್ಲಿನ ವಸ್ತುಗಳ ಮಾರಾಟದ ಮೇಲೆ ವರ್ತಕರು ಪಾವತಿಸಬೇಕಾದ ತೆರಿಗೆಗೆ ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 07-12-2000ದಂದು ಹೊರಡಿಸಲಾದ ಎಫ್ ಡಿ: 226: ಸಿಎನ್ ಎಲ್: 2000ನೇ ಸಂಖ್ಯೆಯ ಅಧಿಸೂಚನೆ;